JULY 20, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಧಾರವಾಡ ಐಐಟಿ, ಘಟಿಕೋತ್ಸವ;** 'ಜ್ಞಾನದ ಸೃಷ್ಟಿ ಮತ್ತು ಅನ್ವಯಿಕತೆಯಲ್ಲಿ, ಸಂಶೋಧನೆಯ ಮೌಲ್ಯವಿದೆ – ಅಭಯ ಕರಂಡೀಕರ.
- **ವಿಶೇಷಚೇತನ ಸ್ನೇಹಿಯಾಗಿ,** ಗ್ರಾಮೀಣ ಅರಿವು ಕೇಂದ್ರ; ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ಡಿಜಿಟಲ್ ಸ್ಪರ್ಷ.
- **ಜಲಾಶಯಗಳ ಅಚ್ಚಕಟ್ಟು ವ್ಯಾಪ್ತಿಯ** ರೈತರು, ದ್ವಿದಳ ಧಾನ್ಯಗಳಿಗೆ ಆದ್ಯತೆ ನೀಡುವಂತೆ, 'ವಾಲ್ಮಿ' ಮನವಿ.
- **ಮಾನವ ಅಭ್ಯುದಯದ,** ಚಾರಿತ್ರಿಕ ಘಟನೆ; ಚಂದ್ರ ದಿನದ ಸ್ಮರಣೆ, ಇಂದು.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ವಿಧಾನಮಂಡಲ ಅಧಿವೇಶನ,** ಆಗಸ್ಟ್ 11 ರಿಂದ 20ರ ವರೆಗೆ, 6 ದಿನಗಳ ಕಾಲ ನಡೆಯಲಿದೆ. 16ನೇ ವಿಧಾನಸಭೆಯ 7ನೇ ಅಧಿವೇಶನವನ್ನು ಉದ್ದೇಶಿಸಿ, ಆಗಸ್ಟ್ 11 ರಂದು, ಬೆಳಗ್ಗೆ 11 ಗಂಟೆಗೆ, ಬೆಂಗಳೂರಿನ ವಿಧಾನಸೌಧದ ಸಭಾಂಗಣದಲ್ಲಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು, ಭಾಷಣ ಮಾಡಲಿದ್ದಾರೆ ಎಂದು, ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

<><><>

**ಸಂಸತ್ತಿನ ಮಳೆಗಾಲದ ಅಧಿವೇಶನ, ನಾಳೆ**ಸೋಮವಾರ 21 ರಿಂದ, ಆಗಸ್ಟ್ 21ರ ವರೆಗೆ, ನಡೆಯಲಿದೆ. ಕೇಂದ್ರ ಸರ್ಕಾರ, ಎಲ್ಲ ರಾಜಕೀಯ ಪಕ್ಷಗಳ ಸಹಕಾರ ಕೋರಲು, ಇಂದು ಸರ್ವಪಕ್ಷ ಸಭೆ ಕರೆದಿದೆ. ಪ್ರಮುಖ ಶಾಸನಗಳ ಕುರಿತು ಚರ್ಚೆ ಮತ್ತು ಅಂಗೀಕಾರ ನಿರೀಕ್ಷಿಸಲಾಗಿದೆ.

<><><>

**'ಜ್ಞಾನದ ಸೃಷ್ಟಿ ಮತ್ತು ಅದರ ಅನ್ವಯಿಕತೆಯಲ್ಲಿ,** ಸಂಶೋಧನೆಯ ಮೌಲ್ಯವಿದ್ದು; ಅವುಗಳ ಪ್ರಯೋಜನ ಜನರಿಗೆ ತಲುಪಬೇಕು' ಎಂದು, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ, ಪ್ರೊಫೆಸರ್ ಅಭಯ ಕರಂಡೀಕರ ಹೇಳಿದ್ದಾರೆ. ಧಾರವಾಡದ

ಭಾರತೀಯ ತಂತ್ರಜ್ಞಾನ ಸಂಸ್ಥೆ, ಐ.ಐ.ಟಿ. ಕೇಂದ್ರೀಯ ವಿದ್ಯಾಗ್ರಹಣ ಸಭಾಗೃಹದಲ್ಲಿ ಜರುಗಿದ, ಆರನೇ ಘಟಿಕೋತ್ಸವದಲ್ಲಿ ಅವರು, ದಿಕ್ಸೂಚಿ ಭಾಷಣ ಮಾಡಿದರು. ಡಿಜಿಟಲ್ ಯುಗದಲ್ಲಿ ಏಕೀಕೃತ ಪಾವತಿ ವ್ಯವಸ್ಥೆ, ಯು.ಪಿ.ಐ. ಅಡಿ ನೂರಾರು ಬಿಲಿಯನ್ ವಹಿವಾಟು ನಡೆಯುತ್ತಿದೆ. ಡಿಜಿಟಲ್ ಲಾಕರ್ಸ್, ಇ–ದಾಖಲೆ, ಇ–ಸಹಿ ದಾಖಲೆಗಳು, ಕಾಗದ ರಹಿತ ವಿನಿಮಯ ಸುಗಮಗೊಳಿಸಿವೆ, ಎಂದರು.

<><><>

**ಬೆಂಗಳೂರಿನ ಪೊಮಚಿ** ರಿಷಭ ಶರದ ರಾಷ್ಟ್ರಪತಿ ಚಿನ್ನದ ಪದಕ ಪಡೆದರು. ಬೆಂಗಳೂರು, ಬಳ್ಳಾರಿ ಹಾಗೂ ಧಾರವಾಡದ ಪ್ರತಿಭಾವಂತ ವಿದ್ಯಾರ್ಥಿಗಳು, ದೇಶದ ನಾನಾ ರಾಜ್ಯಗಳ ಹತ್ತು ವಿದ್ಯಾರ್ಥಿಗಳೊಂದಿಗೆ, ಪುರಸ್ಕಾರ ಪಡೆದಿದ್ದು, ವಿಶೇಷ. ಬೆಂಗಳೂರಿನ ಶ್ರೇಯಾ ನಗದು ಪುರಸ್ಕಾರ ಪಡೆದರು.

<><><>

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,** ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಡಿಜಿಟಲ್ ಸ್ಪರ್ಷ ನೀಡಿ, ಅರಿವು ಕೇಂದ್ರಗಳಾಗಿ, ಮೇಲ್ದರ್ಜೆಗೇರಿಸಿದೆ. ಡಿಜಿಟಲ್ ಅರಿವು ಕೇಂದ್ರಗಳಲ್ಲಿ, ವಿಶೇ ‘ಚೇತನ ಮಕ್ಕಳಿಗೂ, ವಿಶೇ ’ ಕಲಿಕಾ ವಾತಾವರಣ ನಿರ್ಮಿಸುವುದು, ಇಲಾಖೆಯ ಸಂಕಲ್ಪ ಎಂದು, ಸಚಿವ ಪ್ರಿಯಾಂಕ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

**ಗದಗ ಜಿಲ್ಲೆ, ಕುರ್ತಕೋಟಿ ಗ್ರಾಮದ** ದೃಷ್ಟಿ ವಿಶೇ ‘ಚೇತನರಾದ, ಪದವಿ ವಿದ್ಯಾರ್ಥಿನಿ, ಕುಮಾರಿ ಅಕ್ಷತಾ ಮಹೇಶ್ ಸಂಗಟಿ ಅವರು, ಬ್ರೈಲ್ ಲಿಪಿ ಬಳಿಸಿ, ಅರಿವು ಕೇಂದ್ರದಲ್ಲಿ, ಅಕ್ಷರದ ಜ್ಞಾನ ಪಡೆಯುತ್ತಿದ್ದಾರೆ. ಸುಸಜ್ಜಿತ, ವಿಶೇ ‘ಚೇತನ ಸ್ನೇಹಿ, ಕುರ್ತಕೋಟಿ ಗ್ರಾಮ ಪಂಚಾಯಿತಿ ಅರಿವು ಕೇಂದ್ರದ ಕುರಿತು, ಮಾಹಿತಿ ನೀಡಿದ್ದಾರೆ, ಅಕ್ಷತಾ ಸಂಗಟಿ.

<><><>

**ಅಕ್ಷತಾ ಸಂಗಟಿ ಧ್ವನಿ 40 ಸೆಕೆಂದುಗಳು**

<><><>

**ಈಗ ಪ್ರಕಟಣೆ,**

**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(1 ನಿ. 4 ಸೆ.)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಜಲಾಶಯಗಳ ಅಚ್ಚುಕಟ್ಟು ಪ್ರದೇಶದ ರೈತರು,** ಏಕ ಬೆಳೆ ಪದ್ಧತಿ ಕೈಬಿಟ್ಟು, ಬೆಳೆ ಪರಿವರ್ತನೆ ಮಾಡಿ, ಪರ್ಯಾಯ ದ್ವಿದಳ ಧಾನ್ಯಗಳನ್ನು ಬೆಳೆಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ ಕೈಗೊಳ್ಳಿ ಎಂದು, ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ,ವಾಲ್ಮಿ ನಿರ್ದೇಶಕ, ಗಿರೀಶ ಮರಡ್ಡಿ, ರೈತ ಬಾಂಧವರಲ್ಲಿ ಮನವಿ ಮಾಡಿದ್ದಾರೆ. ದಾವಣಗೆರೆ ಜಿಲ್ಲೆ, ಭದ್ರಾ ಅಚ್ಚುಕಟ್ಟು ಪ್ರದೇಶದ ಕೈದಾಳೆ ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾರಿಗಳಿಗೆ ಹಾಗೂ ರೈತರಿಗೆ, ವಾಲ್ಮಿ ವತಿಯಿಂದ ತರಬೇತಿ ಕಾರ್ಯಾಗಾರ ಜರುಗಿತು. ಕಾರ್ಯಾಗಾರ ಉದ್ಘಾಟಿಸಿದ ಮರಡ್ಡಿ ಅವರು, ಜಲಾಶಯಗಳ ನೀರಿನ ಸಮರ್ಪಕ ಬಳಕೆಯಲ್ಲಿ, ನೀರು ಬಳಕೆದಾರ ಸಹಕಾರ ಸಂಘಗಳ ಪಾತ್ರ ಮುಖ್ಯವಾದುದು ಎಂದರು.

<><><>

**ಆರ್ಥಿಕ ಸಂಕ ್ಟದಲ್ಲಿ ಜೀವನ ಸಾಗಿಸುತ್ತಿದ್ದ,** 11 ಜನ ಮಹಿಳೆಯರು, ತಮ್ಮ ಶ್ರಮದಿಂದ, ಸ್ವಾವಲಂಬಿಯಾಗಿ, ಇಂದು ಬದುಕಿಗೆ ಹೊಸ ಅರ್ಥ ನೀಡುತ್ತಿದ್ದಾರೆ. ರಾಯಚೂರು ಜಿಲ್ಲೆ, ಬಿಚ್ಚಾಲೆ ಗ್ರಾಮದಲ್ಲಿ ಸ್ಥಾಪಿತ, ಶ್ರೀ ಬೃಂದಾವನ ಫುಡ್ ಪ್ರೊಡಕ್ಟ್ಸ್ ಘಟಕ, ಅವರ ಇಚ್ಛಾಶಕ್ತಿ, ಪರಿಶ್ರಮ ಮತ್ತು ಸಹಕಾರದ ಫಲ. ಈ ಘಟಕವನ್ನು ರಾಯಚೂರು ಸಂಸದ ಕುಮಾರ ನಾಯಕ ಹಾಗೂ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ದದ್ದಲ್ ಬಸನಗೌಡ, ಇತ್ತೀಚೆಗೆ ಉದ್ಘಾಟಿಸಿದರು. ಮೈಸೂರು ಜಿಲ್ಲೆ, ಸರಗೂರು ತಾಲೂಕಿನ, ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ ಹಾಗೂ PayPal Payments Private Limited ಆರ್ಥಿಕ ನೆರವಿನೊಂದಿಗೆ, ಈ ಘಟಕ ಕಾರ್ಯಾರಂಭಿಸಿದೆ. ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಶೇಂಗಾ ಚಿಕ್ಕಿ, ಶುದ್ಧ ಶೇಂಗಾ ಎಣ್ಣೆ, ಶೇಂಗಾ ಪುಡಿ, ರಾಗಿ ಪಾಪಡ್ ಉತ್ಪಾದಿಸಿ, ಹಿಟ್ಟಿನ ಗಿರಣಿ ಸಹ ನಡೆಸಿ, ಸುತ್ತಲಿನ ಹಳ್ಳಿಗಳಲ್ಲಿ ಹಾಗೂ ರಾಯಚೂರಿನಲ್ಲಿ ತನ್ನ ವ್ಯವಹಾರ ವಿಸ್ತರಿಸಿದೆ. ಕಳೆದ ತಿಂಗಳಲ್ಲಿ ಈ ಘಟಕ, 45 ಸಾವಿರ ರೂಪಾಯಿಗಳ ಉತ್ಪನ್ನಗಳನ್ನು ಮಾರಾಟ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಶ್ರೀ ಬೃಂದಾವನ ಫುಡ್ ಪ್ರೊಡಕ್ಟ್ಸ್ ಘಟಕದ, ಪಾಲುದಾರರಾದ ರೆಹಾನಾ.

<><><>

**ರೆಹಾನಾ ಧ್ವನಿ 40 ಸೆಕೆಂದುಗಳು**

<><><>

**'ಚಂದ್ರನ ಸುಸ್ಥಿರ ಪರಿಶೋಧನೆ** ಮಹತ್ವ ಹಾಗೂ ನಿಯಂತ್ರಿತ ಅನ್ವೇಷಣೆ'ಎಂಬ ನಿಲುವಿನೊಂದಿಗೆ, ಇಂದು ಅಂತಾರಾಷ್ಟ್ರೀಯ ಚಂದ್ರ ದಿನ ಆಚರಿಸಲಾಗುತ್ತಿದೆ. ಜನಸಾಮಾನ್ಯರಲ್ಲಿ, ಚಂದ್ರನ ಕುರಿತ ವೈಜ್ಞಾನಿಕ, ತಾಂತ್ರಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಕುರಿತು, ಅರಿವು ಮೂಡಿಸಲು ಈ ದಿನ ಮೀಸಲಾಗಿದೆ. ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಜ್ ಆಲ್ಡ್ರೀನ್ 1969ರಲ್ಲಿ, ಭಾರತೀಯ ಕಾಲಮಾನದ ಪ್ರಕಾರ, ಜುಲೈ 21ರ ಬೆಳಗ್ಗೆ, 8 ಗಂಟೆ 26 ನಿಮಿಷಕ್ಕೆ ಹಾಗೂ ಅಮೆರಿಕದ ಕಾಲಮಾನ, ಜುಲೈ 20ರ ರಾತ್ರಿ 10 ಗಂಟೆ 56 ನಿಮಿಷಕ್ಕೆ, ಚಂದ್ರನ ಮೇಲೆ ಮೊದಲ ಹೆಜ್ಜೆ ಇರಿಸಿದ, ಮಾನವ ಅಭ್ಯುದಯದ ಚಾರಿತ್ರಿಕ ಘಟನೆಯನ್ನು, ಚಂದ್ರ ದಿನ ಸ್ಮರಿಸುತ್ತದೆ. 'ಮಾನವನಿಗೆ ಇದೊಂದು ಹೆಜ್ಜೆ; ಮನುಕುಲಕ್ಕೆ ದೈತ್ಯ ಜಿಗಿತ' ಎಂದು, ನೀಲ್ ಉದ್ಗರಿಸಿದ್ದು, ಅವಿಸ್ಮರಣೀಯ.

**<><><>**

**ಕಲಬುರ್ಗಿ ಜಿಲ್ಲಾ ವಿಜ್ಞಾನ ಕೇಂದ್ರ,**ಪ್ರೌಢ ಶಾಲೆ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ, 'ಭವಿಷ್ಯದ ಚಂದ್ರನ ಮಾಡ್ಯೂಲ್' ಕುರಿತಾದ, 'ಕ್ಲೇ ಮಾಡೆಲಿಂಗ್' ಸ್ಪರ್ಧೆಯಲ್ಲಿ, ಕಲಬುರ್ಗಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಶಾಲೆಯ, ಸುಪ್ರೀತ್ ಗುರುರಾಜ ಹಾಗೂ ರಂಜೀತ್ ಕೋರವಾರ, ಪ್ರಥಮ ಬಹುಮಾನ ಪಡೆದಿದ್ದಾರೆ ಎಂದು, ಜಿಲ್ಲಾ ವಿಜ್ಞಾನ ಅಧಿಕಾರಿ, ಕೆ.ಎಮ್.ಸುನೀಲ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಧಾರವಾಡ ಐಐಟಿ, ಘಟಿಕೋತ್ಸವ:** 'ಜ್ಞಾನದ ಸೃಷ್ಟಿ ಮತ್ತು ಅನ್ವಯಿಕತೆಯಲ್ಲಿ, ಸಂಶೋಧನೆಯ ಮೌಲ್ಯವಿದೆ – ಅಭಯ ಕರಂಡೀಕರ.
- **ವಿಶೇಷಚೇತನ ಸ್ನೇಹಿಯಾಗಿ,** ಗ್ರಾಮೀಣ ಅರಿವು ಕೇಂದ್ರ; ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ಡಿಜಿಟಲ್ ಸ್ಪರ್ಷ.
- **ಜಲಾಶಯಗಳ ಅಚ್ಚುಕಟ್ಟು ವ್ಯಾಪ್ತಿಯ** ರೈತರು, ದ್ವಿದಳ ಧಾನ್ಯಗಳಿಗೆ ಆದ್ಯತೆ ನೀಡುವಂತೆ, 'ವಾಲ್ಮಿ' ಮನವಿ.
- **ಮಾನವ ಅಭ್ಯುದಯದ,** ಚಾರಿತ್ರಿಕ ಘಟನೆ; ಚಂದ್ರ ದಿನದ ಸ್ಮರಣೆ, ಇಂದು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>